# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1031
2. ಸದಸ್ಯರ ಹೆಸರು : ಶ್ರೀ ಶರವಣ ಟಿ.ಎ.
3. ಉತ್ತರಿಸಬೇಕಾದ ದಿನಾಂಕ : 14.12.2023
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

<table>
<tr><th>ಕ್ರ. ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>(ಅ)</td><td>ಪ್ರಸಕ್ತ ಸಾಲಿನಲ್ಲಿ ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್ 15ರವರೆಗೆ ತಮಿಳುನಾಡಿಗೆ ಹರಿಸಿರುವ ಕಾವೇರಿ ನೀರಿನ ಪ್ರಮಾಣ ಎಷ್ಟು;</td><td>ಕರ್ನಾಟಕ ಹಾಗೂ ತಮಿಳುನಾಡು ಅಂತರ ರಾಜ್ಯ ಗಡಿಯಲ್ಲಿರುವ CWC ಬಿಳಿಗುಂಡ್ಲು ಮಾಪನ ಕೇಂದ್ರದಲ್ಲಿ ಜುಲೈ 2023 ಮಾಹೆಯಿಂದ ನವೆಂಬರ್ 2023 ಮಾಹೆವರೆಗೆ ದಾಖಲಾಗಿರುವ ನೀರಿನ ಪ್ರಮಾಣದ ಮಾಹೆವಾರು ವಿವರಗಳು ಈ ಕೆಳಗಿನಂತಿದೆ.
<table>
<tr><th rowspan="2">ತಿಂಗಳು</th><th>ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ:16.02.2018ರ ಆದೇಶದಲ್ಲಿ ಮಾರ್ಪಡಿಸಿರುವಂತೆ CWDT ಆದೇಶದ ಪ್ರಕಾರ ಸಾಮಾನ್ಯ ಜಲ ವರ್ಷ (Normal Year) ದಲ್ಲಿ ಹರಿಸ ಬೇಕಾದ ನೀರಿನ ಪ್ರಮಾಣ</th><th>ಪ್ರಸ್ತುತ ಜಲ ವರ್ಷದಲ್ಲಿ (2023-24) ಬಿಳಿಗುಂಡ್ಲುವಿನಲ್ಲಿ ಹರಿಸಲಾಗಿರುವ ನೀರಿನ ಪ್ರಮಾಣಗಳ ವಿವರ</th></tr>
<tr><th>TMC</th><th>TMC</th></tr>
<tr><td>ಜುಲೈ</td><td>31.24</td><td>8.748</td></tr>
<tr><td>ಅಗಸ್ಟ್</td><td>45.95</td><td>19.995</td></tr>
<tr><td>ಸೆಪ್ಟಂಬರ್</td><td>36.76</td><td>13.585</td></tr>
<tr><td>ಅಕ್ಟೋಬರ್</td><td>20.22</td><td>12.844</td></tr>
<tr><td>ನವಂಬರ್</td><td>13.78</td><td>10.658</td></tr>
</table>
</td></tr>
<tr><td>(ಆ)</td><td>ಮಳೆ ನೀರಿನ ಕೊರತೆಯ ಸಂದರ್ಭದಲ್ಲಿ ಜಲಾಶಯಗಳಲ್ಲಿ ನೀರಿಲ್ಲದೆ ಇರುವಾಗ ನೀರು ಹಂಚಿಕೆಗಾಗಿ ಜಲ ಸಂಕಷ್ಟ ಸೂತ್ರ ರಚಿಸಬೇಕೆಂದು ನ್ಯಾಯಮಂಡಳಿ ಹೇಳಿದ್ದು, ಅದರಂತೆ, ಈ ಬಾರಿ ತಮಿಳುನಾಡಿಗೆ ನೀರು ಬಿಡುಗಡೆ ಮಾಡುವಾಗ ಕಾವೇರಿ ನಿರ್ವಹಣಾ ಪ್ರಾಧಿಕಾರ, ನಿಯಂತ್ರಣ ಮಂಡಳಿ ಯಾವ ಸೂತ್ರವನ್ನು ಅನುಸರಿಸಿದೆ; ಇಲ್ಲಿ ಅಳವಡಿಸಿಕೊಂಡಿರುವ</td><td>ಸಂಕಷ್ಟ ಜಲ ವರ್ಷಗಳಲ್ಲಿ ಕಣಿವೆ ರಾಜ್ಯಗಳು ನೀರಿನ ಹಂಚಿಕೆಯನ್ನು ಬಳಸುವ ಬಗ್ಗೆ, ಕಾವೇರಿ ಜಲ ವಿವಾದ ನ್ಯಾಯಾಧಿಕರಣದ ಅಂತಿಮ ಆದೇಶದ Clause VII ರಲ್ಲಿ ಈ ಕೆಳಗಿನಂತೆ ಸೂಚಿಸಲಾಗಿದೆ:<br><br>"In case the yield of Cauvery Basin is less in a distress year, the allocated shares shall be proportionately reduced among the States of Kerala, Karnataka, Tamil Nadu and Union Territory of Pondicherry."<br><br>ಸಂಕಷ್ಟ ಜಲ ವರ್ಷಗಳಲ್ಲಿ ನೀರಿನ ಹಂಚಿಕೆ ಕುರಿತು ಸೂತ್ರ ರೂಪಿಸುವ ಬಗ್ಗೆ ಕಾವೇರಿ ಜಲ ನಿಯಂತ್ರಣಾ ಸಮಿತಿಯ (CWRC)/ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದ (CWMA) ಸಭೆಗಳಲ್ಲಿ ಚರ್ಚಿಸಲಾಗುತ್ತಿದ್ದು, ಸಂಕಷ್ಟ ಹಂಚಿಕೆ ಸೂತ್ರವು ಅಂತಿಮವಾಗಬೇಕಿದೆ.<br><br>ಪ್ರಸ್ತುತ, ಜಲವರ್ಷ 2023-24, ಆರಂಭದಿಂದಲೂ ಸಂಕಷ್ಟ ಜಲ ವರ್ಷವಾಗಿದ್ದು, CWRC ಹಾಗೂ CWMA ಸಭೆಗಳಲ್ಲಿ ಕಾವೇರಿ</td></tr>
</table>

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | ಜಲ ಸಂಕಷ್ಟ ಸೂತ್ರದ ಬಗ್ಗೆ ಸಂಪೂರ್ಣ ವಿವರ ನೀಡುವುದು; | ಜಲಾನಯನಗಳ ಜಲಾಶಯಗಳಲ್ಲಿ ಕಳೆದ 30 ವರ್ಷಗಳ ಸರಾಸರಿ ಒಳಹರಿವು, ಕಾಲಕಾಲಕ್ಕೆ ಉಂಟಾದ ಮಳೆಯ ಪ್ರಮಾಣ/ಕೊರತೆ, ಕಣಿವೆಯಲ್ಲಿನ ಪ್ರಮುಖ ಜಲಾಶಯಗಳಲ್ಲಿನ ಶೇಖರಣೆ, ಒಳಹರಿವು/ಹೊರಹರಿವಿನ ಪರಿಸ್ಥಿತಿ, ಹವಾಮಾನ ವಸ್ತು ಸ್ಥಿತಿ, ಮಳೆಯ ಮುನ್ಸೂಚನೆ, ರಾಜ್ಯಗಳಲ್ಲಿನ ಬೆಳೆ ಪ್ರದೇಶ, ನಿಂತ ಬೆಳೆಗಳ ಪರಿಸ್ಥಿತಿ, ಕುಡಿಯುವ ನೀರಿನ ಹಾಗೂ ಕೈಗಾರಿಕಾ ಅವಶ್ಯಕತೆಗಳು, ಇತ್ಯಾದಿ ಅಂಶಗಳ ಪರಿಶೀಲನೆ ನಡೆಸಿ ರಾಜ್ಯದ ಜಲಾಶಯಗಳಲ್ಲಿನ ಒಳಹರಿವಿನ ಕೊರತೆಯನ್ನು ಪರಿಗಣಿಸಿ, ಅಂತರ ರಾಜ್ಯ ಗಡಿಯಲ್ಲಿರುವ CWC ಬಿಳಿಗುಂಡ್ಲು ಮಾಪನ ಕೇಂದ್ರದಲ್ಲಿ ತಮಿಳುನಾಡು ರಾಜ್ಯಕ್ಕೆ ಹರಿಸಬೇಕಾದ ನೀರಿನ ಪ್ರಮಾಣಗಳ ಬಗ್ಗೆ ನಿರ್ದೇಶನಗಳನ್ನು ನೀಡಲಾಗಿದೆ. |
| (ಇ) | ತಮಿಳುನಾಡು ರಾಜ್ಯ ತಮಗೆ ಇನ್ನೂ ಬರಬೇಕಾದ ಬಾಕಿ ನೀರಿಗೆ ಮೊರೆ ಹೋಗಿದ್ದು, ಇದನ್ನು ಎದುರಿಸಲು ಸರ್ಕಾರ ಕಾನೂನು ನಿಟ್ಟಿನಲ್ಲಿ ಯಾವ ಕ್ರಮ ಕೈಗೊಂಡಿದೆ; | ತಮಿಳುನಾಡು ರಾಜ್ಯವು ಪ್ರಸಕ್ತ 2023-24ನೇ ಜಲವರ್ಷದಲ್ಲಿ ನ್ಯಾಯಾಧಿಕರಣದ ಆದೇಶದನ್ವಯ ತಮಿಳುನಾಡು ರಾಜ್ಯಕ್ಕೆ ಹರಿಯಬೇಕಾಗಿದ್ದ ಬಾಕಿ ನೀರಿನ ಪ್ರಮಾಣದ ಕುರಿತು ದಿನಾಂಕ:14.08.2023ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಮಿಸಲೇನಿಯಸ್ ಅರ್ಜಿ ಸಂಖ್ಯೆ: 1871/2023 ದಾಖಲಿಸಿತು.<br><br>ಸದರಿ ಅರ್ಜಿಗೆ ಕರ್ನಾಟಕ ರಾಜ್ಯವು ದಿನಾಂಕ:23.08.2023 ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಪ್ರತಿ ಪ್ರಮಾಣ ಪತ್ರದಲ್ಲಿ ಪ್ರಸ್ತುತ ಜಲವರ್ಷ 2023-24 ಆರಂಭದಿಂದಲೂ ಸಂಕಷ್ಟ ವರ್ಷವಾಗಿದ್ದರೂ ಸಹ ಸರ್ವೋಚ್ಚ ನ್ಯಾಯಾಲಯದ ದಿನಾಂಕ:16.02.2018ರ ಆದೇಶದಲ್ಲಿ ಮಾರ್ಪಡಿಸಿರುವಂತೆ ಕಾವೇರಿ ಜಲ ವಿವಾದ ನ್ಯಾಯಾಧಿಕರಣದ ಆದೇಶದಲ್ಲಿ ಸಾಮಾನ್ಯ ಜಲ ವರ್ಷಕ್ಕೆ ನಿಗದಿಪಡಿಸಿರುವ ಪ್ರಮಾಣದಂತೆ ನೀರು ಹರಿಸಬೇಕೆಂದು ತಮಿಳುನಾಡು ರಾಜ್ಯವು ಕೋರಿರುವುದನ್ನು ರಾಜ್ಯವು ವಿರೋಧಿಸಿರುತ್ತದೆ.<br><br>ಇದಲ್ಲದೇ, ಈ ಪ್ರಕರಣದಲ್ಲಿ ಕರ್ನಾಟಕ ರಾಜ್ಯವು ದಿನಾಂಕ:31.08.2023 ರಂದು ತಮಿಳುನಾಡು ರಾಜ್ಯವು ಸಲ್ಲಿಸಿದ Rejoinderಗೆ ದಿನಾಂಕ:04.09.2023 ರಂದು Sur Rejoinder ಅನ್ನು, ಮತ್ತು ದಿನಾಂಕ:31.08.2023 ರಂದು CWMA ಸಲ್ಲಿಸಿದ reply ಗೆ ದಿನಾಂಕ:04.09.2023 Rejoinder ಅನ್ನು ಹಾಗೂ ದಿನಾಂಕ:20.09.2023 IA Dy.No.38871/2023 ಅರ್ಜಿಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದೆ.<br><br>ರಾಜ್ಯದ ಕಾನೂನು ತಂಡವು ಮೇಲ್ಕಂಡ ಪ್ರಕರಣಗಳಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ರಾಜ್ಯದ ಪ್ರಸ್ತುತ ಜಲಸಂಕಷ್ಟದ ಕುರಿತು ಪ್ರತಿಪಾದಿಸಿದೆ. ಕರ್ನಾಟಕದ ಜಲಾಶಯಗಳಲ್ಲಿ ಕಡಿಮೆ ಪ್ರಮಾಣದ ನೀರಿನ ಶೇಖರಣೆ ಹಾಗು ನಿರೀಕ್ಷಿತ ಪ್ರಮಾಣಕ್ಕಿಂತ ಕಡಿಮೆ ಒಳಹರಿವಿನಿಂದಾಗಿ ಕರ್ನಾಟಕದ ಕಾವೇರಿ ಕಣಿವೆಯ ನೀರಾವರಿ, ಕುಡಿಯುವ ನೀರು ಹಾಗು ಇನ್ನಿತರ ಅವಶ್ಯಕತೆಗಳು ತೀವ್ರ ಸಂಕಷ್ಟಕ್ಕೆ ಸಿಲುಕಿರುವುದು; ಇಷ್ಟೆಲ್ಲಾ ಸಮಸ್ಯೆಗಳ ನಡುವೆಯು CWRC / CWMA ನಿರ್ದೇಶನಗಳನ್ನು ಅನಿವಾರ್ಯವಾಗಿ ಪಾಲಿಸಿರುವುದನ್ನೂ ಸೇರಿದಂತೆ |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | | ಹಲವು ಅಂಶಗಳನ್ನು ರಾಜ್ಯವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಪ್ರತಿಪಾದಿಸಿದೆ.<br><br>ಕೇಂದ್ರ ಸರ್ಕಾರ ಹಾಗೂ ರಾಜ್ಯಗಳು ಮಂಡಿಸಿದ ವಾದಗಳನ್ನು ಆಲಿಸಿ, CWRC/CWMA ಇವುಗಳಲ್ಲಿ ನೀರಾವರಿ, ಕೃಷಿ ಇತ್ಯಾದಿ ವಿಷಯಗಳಲ್ಲಿ ಪರಿಣಿತರು/ತಜ್ಞರು ಇರುವುದನ್ನು ಉಲ್ಲೇಖಿಸಿ ಅದರ ನಿರ್ದೇಶನಗಳನ್ನು ನಿರಾಕರಿಸಲು ಕಾರಣವಿಲ್ಲವೆಂದು ಹಾಗೂ CWMA ನಿರ್ದೇಶನಗಳನ್ನು ಕರ್ನಾಟಕವು ಪಾಲಿಸಿದೆ ಎಂದು CWMA ಯು ಸಲ್ಲಿಸಿದ ಅಫಿಡವಿಟ್ ನಲ್ಲಿಯ ಅಂಶಗಳನ್ನು ಪರಿಗಣಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:21.09.2023 ರ ಆದೇಶದಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ತಮಿಳುನಾಡು ರಾಜ್ಯದ ಅರ್ಜಿಯನ್ನು ತಿರಸ್ಕರಿಸಿ, ಇತ್ಯರ್ಥಗೊಳಿಸಿದೆ. |
| (ಈ) | ಮೇಕೆದಾಟು ಯೋಜನೆ ಜಾರಿಗೆ ಬಂದ ನಂತರ ವಶಪಡಿಸಿಕೊಂಡ ಭೂಮಿ ಪ್ರಮಾಣದ ವಿವರ ಮತ್ತು ಭೂಮಿ ಕಳೆದುಕೊಂಡವರಿಗೆ ಪಾವತಿಸಿದ ಒಟ್ಟು ಮೊತ್ತದ ವಿವರ ನೀಡುವುದು; | ಮೇಕೆದಾಟು ಯೋಜನೆಗೆ ಇದುವರೆಗೂ ಯಾವುದೇ ಭೂಮಿಯನ್ನು ವಶಪಡಿಸಿಕೊಂಡಿರುವುದಿಲ್ಲ. |
| (ಉ) | ಈ ಯೋಜನೆಯ ಕಾಮಗಾರಿಗಳ ಪ್ರಗತಿಯ ವಿವರ ನೀಡುವುದು? | ಮೇಕೆದಾಟು ಯೋಜನೆಗೆ ಸಕ್ಷಮ ಪ್ರಾಧಿಕಾರಗಳಿಂದ ಅಗತ್ಯ ತೀರುವಳಿ / ಅನುಮೋದನೆ ಪಡೆದು ಯೋಜನೆ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುವುದು. |

ಸಂಖ್ಯೆ: ಜಸಂಇ 81 ಕಾವಿಇ 2023

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ